ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 942 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ, (ಪದವೀಧರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11-03-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮೈಸೂರು – ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 275ರ ನಿರ್ಮಾಣಕ್ಕೆ ಬಳಕೆಯಾಗಿರುವ ಅರಣ್ಯ ಪ್ರದೇಶದ ಒಟ್ಟು ವಿಸ್ತೀರ್ಣ ಎಷ್ಟು; ಎಲ್ಲೆಲ್ಲಿ ಎಷ್ಟು ಅರಣ್ಯ ಪ್ರದೇಶ ಬಳಕೆ ಆಗಿದೆ; (ಜಿಲ್ಲಾವಾರು ವಿವರ ನೀಡುವುದು) | ಮೈಸೂರು – ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-275 ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ವ್ಯಾಪ್ತಿಗೆ ಒಳಪಡುತ್ತದೆ.<br><br>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ಮೈಸೂರು – ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-275ರ ನಿರ್ಮಾಣಕ್ಕೆ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ-20.85 Ha ಮತ್ತು ಮಂಡ್ಯ ಜಿಲ್ಲೆಯಲ್ಲಿ 8.42 Ha ಅರಣ್ಯ ಪ್ರದೇಶ ಬಳಕೆಯಾಗಿರುತ್ತದೆ. |
| ಆ | ವನ್ಯಜೀವಿಗಳ ಚಲನವಲನಕ್ಕೆ ಅನುಗುಣವಾಗಿ ಹೆದ್ದಾರಿ ದಾಟಲು ಅನುಕೂಲವಾಗುವಂತೆ ಯಾವ್ಯಾವ ಸ್ಥಳಗಳಲ್ಲಿ ಅಂಡರ್ ಪಾಸ್ ಮತ್ತು ಓವರ್ ಪಾಸ್‌ಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ಅರಣ್ಯ ಇಲಾಖೆಯು ಪ್ರಸ್ತಾಪಿಸಿರುವ ವನ್ಯಜೀವಿ ಉಪಶಮನ ಕ್ರಮಗಳ (Wild life mitigation measures) ಪ್ರಕಾರ ಮೈಸೂರು – ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 275ರ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಅಂಡರ್‌ಪಾಸ್ ಮತ್ತು ಓವರ್‌ಪಾಸ್‌ಗಳ ವಿವರಗಳು ಕೆಳಗಿನಂತಿವೆ:-<br>1. ಆನೆಗಳ ಅಂಡರ್‌ಪಾಸ್ (Elephant Underpass): ಮಾಯಗಾನಹಳ್ಳಿ ಗ್ರಾಮ, ರಾಮನಗರ ತಾಲ್ಲೂಕು, ಕಿ.ಮೀ. 39+393.<br>2. ಪ್ರಾಣಿಗಳ ಮೇಲ್ಸೇತುವೆ (Animal Overpass): ಕೇತೋಹಳ್ಳಿ ಗ್ರಾಮ, ರಾಮನಗರ ತಾಲ್ಲೂಕು, ಕಿ.ಮೀ. 42+880.<br>3. ಪ್ರಾಣಿಗಳ ಮೇಲ್ಸೇತುವೆ (Animal Overpass): ಸಬ್ಬನಕುಪ್ಪೆ ಗ್ರಾಮದ ಹತ್ತಿರ, ಶ್ರೀರಂಗಪಟ್ಟಣ ತಾಲ್ಲೂಕು, ಕಿ.ಮೀ.119+210. ಪ್ರಾಣಿಗಳ ಮೇಲ್ಸೇತುವೆ ನಿರ್ಮಾಣವು 2022 ರಲ್ಲಿ ಪೂರ್ಣಗೊಂಡಿದ್ದು, ಎರಡೂ ಬದಿಯ ಅಪ್ರೋಚ್ ರಸ್ತೆ ನಿರ್ಮಾಣವು ಅರಣ್ಯ ಇಲಾಖೆಯಿಂದ ಅರಣ್ಯ ಅನುಮತಿ (Forest Clearance) ಲಭ್ಯವಾಗದ ಕಾರಣ ಬಾಕಿ ಇರುತ್ತದೆ.<br>4. ಪ್ರಾಣಿಗಳ ಅಂಡರ್‌ಪಾಸ್ (Animal Underpass): ಎಂ. ಶೆಟ್ಟಿಹಳ್ಳಿ ಗ್ರಾಮ, ಶ್ರೀರಂಗಪಟ್ಟಣ ತಾಲ್ಲುಕು ಕಿ.ಮೀ. 120+025. |
| ಇ | ಶ್ರೀರಂಗಪಟ್ಟಣ ತಾಲ್ಲೂಕಿನ ಸಬ್ಬನಕುಪ್ಪೆ ಗ್ರಾಮ ಸಮೀಪ ಸೇರಿದಂತೆ ಹೆದ್ದಾರಿಯ ವಿವಿಧ ಸ್ಥಳಗಳಲ್ಲಿ ನಿರ್ಮಿಸಬೇಕಿದ್ದ ಅಂಡರ್ ಪಾಸ್ ಮತ್ತು ಓವರ್ ಪಾಸ್ ಕಾಮಗಾರಿಗಳು ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ಮೂಲ ರಿಯಾಯಿತಿ ಒಪ್ಪಂದದ ವ್ಯಾಪ್ತಿಯ ಪ್ರಕಾರ ಬೆಂಗಳೂರು – ಮೈಸೂರು ಹೆದ್ದಾರಿಯಲ್ಲಿ ಅಂಡರ್‌ಪಾಸ್ ಮತ್ತು ಓವರ್ ಪಾಸ್‌ಗಳನ್ನು ಪೂರ್ಣಗೊಳಿಸಲಾಗಿದೆ.<br><br>ಸಬ್ಬನಕುಪ್ಪೆ ಸಮೀಪದ ಪ್ರಾಣಿಗಳ ಮೇಲ್ಸೇತುವೆ (Animal Overpass) ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಎರಡೂ |

| ಕ್ರ ಸಂ | ಪ್ರಶ್ನೆ | ಉತ್ತರ |
| --- | --- | --- |
| | ಬಂದಿದೆಯೇ; | ಬದಿಯ ಅಪ್ರೋಚ್ ರಸ್ತೆ ನಿರ್ಮಾಣವು ಅರಣ್ಯ ಇಲಾಖೆಯಿಂದ ಅರಣ್ಯ ಅನುಮತಿ (Forest Clearance) ಲಭ್ಯವಾಗದ ಕಾರಣ ಬಾಕಿ ಇರುತ್ತದೆ.<br><br>ಹೆಚ್ಚುವರಿಯಾಗಿ, ಶ್ರೀರಂಗಪಟ್ಟಣ ತಾಲ್ಲೂಕಿನ ಗೌಡಹಳ್ಳಿ ಗ್ರಾಮದ ಬಳಿ ಕಿ.ಮೀ. 119+210 ರಲ್ಲಿ ಮತ್ತು ಮಂಡ್ಯ ತಾಲ್ಲೂಕಿನ ಹನಕೆರೆ ಗ್ರಾಮದ ಬಳಿ ಕಿ.ಮೀ.88+600ರಲ್ಲಿರುವ ಅಂಡರ್‌ಪಾಸ್ ನಿರ್ಮಾಣ ಕಾಮಗಾರಿಗಳನ್ನು ಬೆಂಗಳೂರು – ಮೈಸೂರು ಹೆದ್ದಾರಿಯ ಹೆಚ್ಚುವರಿ ಕಾಮಗಾರಿಗಳಿಗಾಗಿ ಪ್ರತ್ಯೇಕ ಸ್ವತಂತ್ರ (Standalone) ಪ್ರಸ್ತಾವನೆಯಡಿಯಲ್ಲಿ ಸೇರಿಸಲಾಗಿದೆ. |
| ಈ | ಬಂದಿದ್ದಲ್ಲಿ ಸ್ಥಗಿತಗೊಂಡಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು; (ಸಂಪೂರ್ಣ ವಿವರ ನೀಡುವುದು) | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ಕಿ.ಮೀ. 119+210 ರಲ್ಲಿ ಇರುವ ಪ್ರಾಣಿಗಳ ಮೇಲ್ಸೇತುವೆ (Animal Overpass) ಗೆ ಸಂಬಂಧಿಸಿದ ಎರಡೂ ಬದಿಯ ಅಪ್ರೋಚ್ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಅರಣ್ಯ ಇಲಾಖೆಯಿಂದ ಅರಣ್ಯ ಅನುಮತಿ (Forest Clearance) ಲಭ್ಯವಾದ ನಂತರ ಕೈಗೆತ್ತಿಕೊಳ್ಳಲಾಗುತ್ತದೆ. ಪ್ರಸ್ತುತ ಈ ಪ್ರಸ್ತಾವನೆಯು ಅರಣ್ಯ ಇಲಾಖೆಯ ನೋಡಲ್ ಅಧಿಕಾರಿಯವರ ಬಳಿ ಪರಿಶೀಲನೆಯಲ್ಲಿದೆ.<br><br>ಗೌಡಹಳ್ಳಿ ಮತ್ತು ಹಣೇಕೆರೆ ಸಮೀಪದ ಕ್ರಾಸಿಂಗ್ ರಚನೆಯನ್ನು ಒಳಗೊಂಡಿರುವ NH-275ರ ಹೆಚ್ಚುವರಿ ಕಾಮಗಾರಿಗಳಿಗೆ ನಿಯೋಜಿತ ದಿನಾಂಕ (Appointed date): 20.01.2026ರಂದು ಘೋಷಿಸಲಾಗಿದೆ. ನಿಯೋಜಿತ ದಿನಾಂಕದಿಂದ 2 ವರ್ಷಗಳು ನಿಗದಿತ ಪೂರ್ಣಗೊಳಿಸುವ ಅವಧಿಯಾಗಿರುತ್ತದೆ. |
| ಉ | ಅಂಡರ್ ಪಾಸ್ ಅಥವಾ ಓವರ್ ಪಾಸ್ ಮೂಲಕ ಹೆದ್ದಾರಿ ದಾಟಲು ಸಾಧ್ಯವಾಗದೇ ಹೆದ್ದಾರಿ ಮೂಲಕ ರಸ್ತೆ ದಾಟುವ ಸಂದರ್ಭದಲ್ಲಿ ಮೃತಪಟ್ಟಿರುವ ವನ್ಯಜೀವಿಗಳ ಸಂಖ್ಯೆ ಎಷ್ಟು; ಯಾವ್ಯಾವ ಪ್ರಾಣಿಗಳು ಮೃತಪಟ್ಟಿದೆ ವಿವರ ನೀಡುವುದು; | ಅರಣ್ಯ ಇಲಾಖೆಯವರು ನೀಡಿರುವ ವರದಿಯ ಪ್ರಕಾರ ಶ್ರೀರಂಗಪಟ್ಟಣ ವಲಯ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ–275ರ ಕೆ. ಶೆಟ್ಟಿಹಳ್ಳಿ ಗಸ್ತಿನ ಸಬ್ಬನಕುಪ್ಪೆ ಜಂಕ್ಷನ್ ಸಮೀಪ ರಸ್ತೆ ಅಪಘಾತದಲ್ಲಿ ಒಂದು ಗಂಡು ಚಿರತೆ ಸಾವನಪ್ಪಿರುತ್ತದೆ. ಈ ಸಂಬಂಧ WLOR No:06/2025-26, ದಿನಾಂಕ:07-11-2025 ನ್ನು ದಾಖಲಿಸಿದ್ದು, ತನಿಖೆ ಪ್ರಗತಿಯಲ್ಲಿದೆ. |
| ಊ | ಮಂಡ್ಯ ತಾಲ್ಲೂಕಿನ ಇಂಡುವಾಳು ಗ್ರಾಮ ಬಳಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಅಪೂರ್ಣವಾಗಿರುವ ಸರ್ವಿಸ್ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಇರುವ ತಾಂತ್ರಿಕ ತೊಡಕುಗಳೇನು; ಕಾಮಗಾರಿ ಪೂರ್ಣಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು? | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ರಿಯಾಯಿತಿ ಒಪ್ಪಂದದ ವ್ಯಾಪ್ತಿಯ ಪ್ರಕಾರ ಮಂಡ್ಯ ಜಿಲ್ಲೆಯ ಇಂದುವಾಲು ಗ್ರಾಮದ ಬಳಿಯ ಎಲ್ಲಾ ಸರ್ವೀಸ್ ರಸ್ತೆ ಕಾಮಗಾರಿಗಳು ಪೂರ್ಣಗೊಂಡಿವೆ. ಇದಲ್ಲದೆ ಇಂದುವಾಳು ಗ್ರಾಮದ ಬಳಿ ರೈಲ್ವೆ ಮೇಲ್ಸೇತುವೆ (ROB) ಸ್ಥಳದಲ್ಲಿ ಕಾಮಗಾರಿಯ ಮೂಲ ಪ್ರಸ್ತಾವನೆ ಪ್ರಕಾರ ಪ್ರಸ್ತುತ ಯಾವುದೇ ಸರ್ವೀಸ್ ರಸ್ತೆಯ ನಿರಂತರತೆ (Continuity) ಇರುವುದಿಲ್ಲ. ಆದಾಗ್ಯೂ, ಬೆಂಗಳೂರು – ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚುವರಿ ಕಾಮಗಾರಿಗಳಿಗಾಗಿ ROB ಸ್ಥಳದಲ್ಲಿ ಒಂದು ಬದಿಯ ಸರ್ವೀಸ್ ರಸ್ತೆಯ ನಿರಂತರತೆಯನ್ನು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | ಪ್ರತ್ಯೇಕ ಸ್ವತಂತ್ರ (Standalone) ಪ್ರಸ್ತಾವನೆಯಡಿಯಲ್ಲಿ ಸೇರಿಸಲಾಗಿದೆ.<br><br>NH-275 ರ ಹೆಚ್ಚುವರಿ ಕಾಮಗಾರಿಗಳಿಗೆ ನಿಯೋಜಿತ ದಿನಾಂಕ 20.01.2026 (Appointed date) ರಂದು ಘೋಷಿಸಲಾಗಿದೆ. ನಿಯೋಜಿತ ದಿನಾಂಕದಿಂದ 2 ವರ್ಷಗಳು ನಿಗದಿತ ಪೂರ್ಣಗೊಳಿಸುವ ಅವಧಿಯಾಗಿರುತ್ತದೆ. |

ಸಂಖ್ಯೆ: ಲೋಇ 161 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು